ಪದಬಂಧ



ಎಡದಿಂದ ಬಲಕ್ಕೆ
1. ನ್ಯಾಯ ಸಮ್ಮತವಲ್ಲದ್ದನ್ನು ತಿರಸ್ಕರಿಸುವಲ್ಲಿ ಕಿಂಚಿತ್ತೂ ಶ್ರಮ ಇರದು 4
3. ಎಲ್ಲರಿಗೂ ಆನಂದವನ್ನೇ ಹರಡುತ್ತಿದ್ದಾನೆ ಆಕೆಯ ಮಗ 3
4. ಆತ ಕ್ಯಾಕರಿಸುವ ಶಬ್ದ ಕೇಳಲಾಗದಷ್ಟು ಒರಟು 3
6. ಪ್ರಚೋದನಕಾರೀ ವಿಚಾರಗಳನ್ನು ಎಲ್ಲೆಡೆ ಹರಡುತ್ತಾನೆ ಇವನು 4
8. ಎಲ್ಲರಿಗೂ ಹಾನಿಯನ್ನೇ ಮಾಡುವಂತಿದೆ ಆಕೆಯ ನೀಚ ಬುದ್ಧಿ 4
10. ಕ್ಷಣ ಮಾತ್ರವೂ ಬೆಂಬಿಡದೆ ಪೀಡಿಸಿ ಸಾಲ ವಸೂಲಿ ಮಾಡುವವ 4
12. ನೋಡಿದ್ದನ್ನೇ ವಿವರಿಸುತ್ತ ನಾರಿಯರಿಗೆ ಹಾಸ್ಯ ತರಿಸುವ ಮಾತು 4
16. ನಿಗೂಢ ಪ್ರಕರಣವನ್ನು ಭೇದಿಸಿದವನಿಗೆ ಎಲ್ಲರಿಂದಲೂ ಹೊಗಳಿಕೆ 3
17. ಮಾತೇ ಬೇಕಿಲ್ಲ; ಆ ಹೂವು ಜಾಜಿ ಎಂಬುದೇ ಖಚಿತ 3
18. ಅಲ್ಲಿ ಜಲಕ್ಷಾಮಕ್ಕೆ ಸಿಲುಕಿದ್ದು ಶತ ಸಹಸ್ರ ಮಂದಿ 4

ಮೇಲಿನಿಂದ ಕೆಳಕ್ಕೆ
1. ಆರೋಗ್ಯವೆಂಬುದು ಯಾರಿಗೇ ಆದರೂ ಅತ್ಯಮೂಲ್ಯ 3
2. ಕಲ್ಲು ಕೆತ್ತುವ ಕೆಲಸವೇ ಅಲ್ಲಿ ಎಲ್ಲವೂ 3
3. ನೆತ್ತರು ಹರಿವಂತೆ ಹೊಡೆದಾಡಿದ್ದಾಯಿತು ; ಆಮೇಲೆ ...? 3
5. ಶುಭ ಕಾರ್ಯ ನಡೆಸಲು ನಿಮಿತ್ತ ಕಾಣಬೇಕೇ? 3
6. ಎಲ್ಲ ಸಮಾರಂಭಗಳಲ್ಲೂ ಪ್ರಧಾನವಾದದ್ದು ಮುಖಾಲಂಕಾರ ಸಾಮಗ್ರಿ ತಾನೇ ? 4
7. ಕೋವಿ ಕಂಡೊಡನೆ ಕಳ್ಳನಿಗೆ ಭಾರೀ ತಬ್ಬಿಬ್ಬು 4
8. ಮಹೇಶ್ವರನನ್ನು ನಿಂದಿಸಿದವನಿಗೆ ಹೀಯಾಳಿಕೆ ತುಂಬಿದ ಮಾತು 4
9. ಆತನ ಗೆಳತಿ ಹೇಡಿಯಷ್ಟೇ ಅಲ್ಲ, ಬುದ್ಧಿ ಇಲ್ಲದವಳು ಕೂಡ 4
11. ವಿಪರೀತ ಪುಣ್ಯಕರ ; ಆದರೂ ತಲೆಕೆಳಕಾಯಿತಲ್ಲ! 3
13. ಎಷ್ಟು ತೆಳ್ಳಗಿದ್ದಾಳೆ ನೋಡಿ ಆಕೆಯ ಸ್ನೇಹಿತೆ? 3
14. ಕೋಲು ಹಿಡಿದವನ ವೇಷದಲ್ಲಿ ಯಾರೀ ಪಾಂಡವ? 3
15. ಮೋಸವೇನಿಲ್ಲ; ಅಲ್ಲಿ ಯಾರೂ ಹೆಚ್ಚು ಕಡಿಮೆ ಇಲ್ಲ 3

## 11.11.2021 ಉತ್ತರಗಳು

ಎಡದಿಂದ ಬಲಕ್ಕೆ
1. ಸಂಧ್ಯಾರಾಗ 3. ಆರಂಭ 4. ಹರಾಮ 6. ವರ್ತಮಾನ 7. ನೆಗೆತ 9. ಕಾನನ 11. ಪುಕಾರು 13. ಕರುಣೆ 15. ಶರವೇಗ 17. ಕೆರೆತ 18. ಮಾರ್ಜನ 19. ಕಳೇಬರ

ಮೇಲಿನಿಂದ ಕೆಳಕ್ಕೆ
1. ಸಂಭವ 2. ಗಹನ 3. ಆಟಿಗೆ 5. ಮರ್ದನ 7. ನೆನಪು 8. ತವರು 9. ಕಾರ್ಮಿಕ 10. ನವಣೆ 12. ಕಾಣಿಕೆ 14. ರುಜಿನ 15. ಶತಕ 16. ಗಮಾರ

ಪ್ರಶ್ನಾಂಕಣ

# ಮಿಯೋಫಾನಾ: ಏನು ವಿಸ್ಮಯ?

ಮಿಯೋಫಾನಾ: ಅದೊಂದು ಅತ್ಯಂತ ವಿಸ್ಮಯದ ಆದರೆ ಅಷ್ಟೇ ಅಪರಿಚಿತವಾದ ಪ್ರಾಣಿವರ್ಗ. ಬರಿಗಣ್ಣಿಗೆ ನೇರವಾಗಿ ಗೋಚರಿಸದ ಆದರೂ ಸರ್ವ ಪರಿಚಿತವಾದ ಸೂಕ್ಷ್ಮಾಣು ಜೀವಿ ವರ್ಗ 'ಮೈಕ್ರೋಫಾನಾ'ದ ಒಂದು ಉಪವರ್ಗವೇ ಮಿಯೋಫಾನಾ. ಧರೆಯ ಜೀವಿಪರಿಸರದಲ್ಲಿ ಬಹಳ ಮಹತ್ವವನ್ನು ಪಡೆದಿದ್ದು, ಹಾಗಿದ್ದೂ ಬಹುಪಾಲು ಸಂಪೂರ್ಣ ಅಜ್ಞಾತವಾಗಿಯೇ ಇರುವ ಈ ಪ್ರಾಣಿಗಳ ಬಗೆಗೆ ನಡೆದಿರುವ ಅಧ್ಯಯನ ಮತ್ತು ಸಂಶೋಧನೆಗಳೂ ಬಹಳ ಸೀಮಿತ; ಆದ್ದರಿಂದಲೇ ಪಠ್ಯಪುಸ್ತಕಗಳಲ್ಲೂ ಈ ಪ್ರಾಣಿವರ್ಗ ಸ್ಥಾನ ರಹಿತ.

ಮಿಯೋಫಾನಾ ವರ್ಗದ ಎಲ್ಲ ಪ್ರಾಣಿಗಳದೂ ಪ್ರಧಾನವಾಗಿ 'ಬೀಚು'ಗಳಲ್ಲಿ, ಎಂದರೆ ಕಡಲಂಚಿನ ಮರಳಿನ ಹಾಸುಗಳಲ್ಲಿ, ವಾಸ್ತವ್ಯ. ಮರಳ ಕಣಗಳ ನಡುವೆ ನುಸುಳುತ್ತ, ತೆವಳುತ್ತ, ನೆಗೆದಾಡುತ್ತ ಅವುಗಳ ಅಸ್ತಿತ್ವ. ಮರಳಿನ ಕಣಗಳನ್ನೇ ಬಿಗಿಹಿಡಿದು ಅಲೆಗಳ ಹೊಡೆತ ಸೆಳೆತಗಳಿಂದ ರಕ್ಷಿಸಿಕೊಳ್ಳುತ್ತ, ಕೊಚ್ಚಿಹೋಗದಿರಲು ಅವಿರತ ಪ್ರಯತ್ನಿಸುತ್ತ ಹಗಲಿರುಳೂ ಅವುಗಳ ಬದುಕಿನಾಟ. ಸೂಕ್ಷ್ಮದರ್ಶಕಗಳ ಮೂಲಕವಷ್ಟೇ ಕಾಣಬಹುದಾದ ಅವುಗಳ ರೂಪ ಆಕಾರಗಳೂ ಊಹಾತೀತ; ಭಯಾನಕ ಕೂಡ (ಇವುಗಳ ಮೂರು ಪ್ರಭೇದಗಳನ್ನು ಚಿತ್ರಗಳಲ್ಲಿ ಗಮನಿಸಿ). ಹಾಗಿದ್ದರೂ ಅವುಗಳಿಂದ ಮನುಷ್ಯರೂ ಸೇರಿದಂತೆ ಬೇರಾವ ಪ್ರಾಣಿಗೂ ಯಾವುದೇ ಉಪದ್ರವ ಇಲ್ಲ.

ಮಿಯೋಫಾನಾ ವರ್ಗದ ಪ್ರಾಣಿಗಳ ಪ್ರಭೇದ ಸಂಖ್ಯೆ ಮತ್ತು ವೈವಿಧ್ಯ ಕಲ್ಪನಾತೀತ. ಯಾವುದೇ ಬೀಚಿನ ಒಂದೇ ಹಿಡಿ ಮರಳಿನಲ್ಲೂ ಅವುಗಳ ಸಂಖ್ಯೆ ಹತ್ತು ಸಾವಿರಕ್ಕಿಂತಲೂ ಅಧಿಕ! ತಜ್ಞರ ಪ್ರಕಾರ ವಾಸ್ತವವಾಗಿ ಈ ವರ್ಗದ ಪ್ರಾಣಿಗಳದು ಅಮೆಜಾನ್ ವೃಷ್ಟಿವನದ ಜೀವಿ ವೈವಿಧ್ಯಕ್ಕಿಂತ ಅಧಿಕ! ಆದರೂ, ಈ ಎರಡೂ ಅಂಶಗಳ ಅಂಕಿ ಸಂಖ್ಯೆಗಳು ಸ್ಪಷ್ಟವಾಗಿ ತಿಳಿದಿಲ್ಲ. ಮಿಯೋಫಾನಾ ಪ್ರಾಣಿಗಳದೆಲ್ಲ 42 ಮೈಕ್ರಾನ್‌ಗಿಂತ (0.042 ಮಿ.ಮೀ.) ಕಡಿಮೆ ಅಳತೆಯ ಶರೀರ. ಅಲೆಗಳ ಮೂಲಕ ಬೀಚುಗಳಿಗೆ ಬಂದು ಬೀಳುವ ಸಾಗರದ ಮೃತ ಪ್ರಾಣಿಗಳ ಮತ್ತು ಸಸ್ಯಗಳ ಕಣ ಗಾತ್ರದ ಅವಶೇಷಗಳೇ ಇವುಗಳ ಆಹಾರ. ಈ ಪ್ರಾಣಿಗಳ ಬದುಕಿನ ಬೇರಾವ ಮುಖಗಳೂ ಇನ್ನೂ ಸರಿಯಾಗಿ ವಿವರವಾಗಿ ತಿಳಿದಿಲ್ಲ.




ಆದರೆ, ಕಡಲ ತೀರಗಳ ಮರಳ ಹಾಸುಗಳ ಸ್ವಚ್ಛತೆ ಮತ್ತು ಸ್ವಾಸ್ಥ್ಯಗಳ ಸಂರಕ್ಷಣೆಯಲ್ಲಿ ಮಿಯೋಫಾನಾ ಪ್ರಾಣಿಗಳ ಪಾತ್ರ ಅತ್ಯಂತ ಪ್ರಮುಖ. ಈ ಪ್ರಾಣಿಗಳು ಇಲ್ಲದಿದ್ದರೆ ಬೀಚುಗಳಿಗೆ ನಿರಂತರ ಬಂದು ಬೀಳುವ ಅಪಾರ ಪ್ರಮಾಣದ ಮೃತ ಜೀವಿಗಳ ಸೂಕ್ಷ್ಮ ಗಾತ್ರದ ಅವಶೇಷಗಳು ಅಲ್ಲೇ ಕೊಳೆತು ಬೀಚುಗಳೆಲ್ಲ ಅಸಹನೀಯ ದುರ್ವಾಸನೆಯ ಕೆಸರಾಗುತ್ತವೆ! ಹಾಗೆಂದರೆ, ಈ ಪ್ರಾಣಿಗಳಿಂದಾಗಿಯೇ ಬೀಚುಗಳು ಸುಂದರ, ಸ್ವಚ್ಛ, ಆಕರ್ಷಕ ಮತ್ತು ವಿಹಾರ ಯೋಗ್ಯ ಎಂಬುದು ಸ್ಪಷ್ಟ ತಾನೇ?

■ ಎನ್. ವಾಸುದೇವ್